**ಈ ಸಾಕ್ಷಿಯನ್ನು ದಿನಾಂಕ 27.03.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರಃ ಕೆ ವಿ ಕೆ ವಕೀಲರಿಂದಃ-**

ನಾನು ಸುಮಾರು 20 ವರ್ಷಗಳಿಂದ 3 ನೇ ಪ್ರತಿವಾದಿಯ ಪರ ಖಾಸಗಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ದಾವೆಯಲ್ಲಿಯ ದಾವಾ ಆಸ್ತಿಯ ಬಗ್ಗೆ ನನಗೆ ವೈಯುಕ್ತಿಕವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹಿರಿಯೂರು ತಾಲ್ಲೋಕಿನ ಶಾಸಕಿ ಎಂದರೆ ಸರಿ. ಅವರ ತಂದೆ ಎ.ಕೃಷ್ಣಪ್ಪ ರವರು ಮಾಜಿ ಸಚಿವರು ಎಂದರೆ ಸರಿ. 3 ನೇ ಪ್ರತಿವಾದಿ ಮತ್ತು ಅವರ ತಂದೆಗೆ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಳ್ಳೆಯ ಹೆಸರಿದೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾರೀ ಪ್ರಭಾವಿ ವ್ಯಕ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಕೆ.ಆರ್.ಪುರಂ ಹೋಬಳಿಯಲ್ಲಿ ಬರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿ ಸ್ವತಃ ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಸ್ವತಃ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದ ಪಕ್ಷದಲ್ಲಿ ಸತ್ಯ ಹೊರಬರುತ್ತದೆಂಬ ಉದ್ದೇಶಕ್ಕಾಗಿ ನನ್ನನ್ನು ಸಾಕ್ಷ್ಯ ನುಡಿಯಲು ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ಪವರ್ ಆಫ್ ಅಟಾರ್ನಿಯನ್ನು 3 ನೇ ಪ್ರತಿವಾದಿ ಹಿರಿಯೂರಿನಲ್ಲಿರುವ ತಮ್ಮ ಮನೆಯಲ್ಲಿ ಮಾಡಿಕೊಟ್ಟಿರುತ್ತಾರೆ. 3 ನೇ ಪ್ರತಿವಾದಿ ಉದಯ್‌ಕರಿಯಪ್ಪ.ಬಿ.ಜಿ ರವರ ಮುಂದೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಿಡಿ-1 ಬೆಂಗಳೂರಿನಲ್ಲಿ ನೋಟರಿಯಾಗಿರುತ್ತದೆ. ನಿಡಿ-1 ದಾಖಲೆಯನ್ನು ನನಗೆ ಹಿರಿಯೂರಿನಲ್ಲಿ ಕೊಟ್ಟಿರುತ್ತಾರೆ. ಉದಯ್‌ಕರಿಯಪ್ಪ.ಬಿ.ಜಿ ರವರ ನೋಟರಿ ಕಚೇರಿ ಎಲ್ಲಿರುತ್ತದೆ ಎಂದು ಗೊತ್ತಿಲ್ಲ.

ದಾವಾ ಆಸ್ತಿಯನ್ನು ಮೊದಲ ಬಾರಿಗೆ ನಾನು 2003 ನೇ ಇಸವಿಯಲ್ಲಿ ನೋಡಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು 3 ನೇ ಪ್ರತಿವಾದಿ ದಾಖಲಿಸುತ್ತಾರೆ ಎಂದರೆ ಸರಿ. ಪ್ರತಿವಾದ ಪತ್ರವನ್ನು ತಯಾರಿಸಲು 3 ನೇ ಪ್ರತಿವಾದಿಯೇ ವಕೀಲರಿಗೆ ಮಾಹಿತಿ ನೀಡಿರುತ್ತಾರೆ. 3 ನೇ ಪ್ರತಿವಾದಿ ಯಾವ ರೀತಿ

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-12.pdf

ಈ ದಾವೆಯಲ್ಲಿ ಸಾಕ್ಷ್ಯ ನುಡಿಯಬೇಕಂದು ಹೇಳಿದಂತೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ಕುಂದಲಹಳ್ಳಿ ಗ್ರಾಮದ ಮೂಲ ಸರ್ವೆ ನಂ: 123/3 ರ ವಿಸ್ತೀರ್ಣ 6 ಗುಂಟೆ ಎಂದರೆ ಸರಿಯಲ್ಲ. ಮೂಲ ಸರ್ವೆ ನಂ: 122/3 ನಂಬರಿಗೆ ನಂತರದ ಸಮಯದಲ್ಲಿ ಸರ್ವೆ ನಂ: 122/4 ಎಂದು ಹೊಸ ಸರ್ವೆ ನಂಬರ್ ಕೊಡಲಾಗಿದೆ ಎಂದರೆ ಸರಿ.

ವಾದಪತ್ರದಲ್ಲಿ ದಾವಾ ಆಸ್ತಿಗೆ ನಮೂದಿಸಲಾದ ಚಕ್ಕುಬಂಧಿಗಳು ಸರಿಯಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಖಾಸಗಿ ಆಸ್ತಿ ಇದ್ದು, ಅದು ಯಾರಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ 3 ನೇ ಪ್ರತಿವಾದಿಯ ಪತಿಯಾದ ಡಿ.ಟಿ.ಶ್ರೀನಿವಾಸ್ ರವರಿಗೆ ಸೇರಿದ ಆಸ್ತಿ ಇರುತ್ತದೆ. ಉತ್ತರಕ್ಕೆ ತಿಪ್ಪಾರೆಡ್ಡಿ ಎಂಬುವವರಿಗೆ ಸಂಬಂಧಿಸಿದ ಕಾಂಪ್ಲೆಕ್ಸ ಇರುತ್ತದೆ. ದಕ್ಷಿಣಕ್ಕೆ ರೆಡ್ಡಿ ಎಂಬುವವರಿಗೆ ಸೇರಿದ ಆಸ್ತಿ ಇದ್ದು, ಅದನ್ನು 3 ನೇ ಪ್ರತಿವಾದಿಯ ಪತಿ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಚಕ್ಕುಬಂಧಿಯನ್ನು ರುಜುವಾತುಪಡಿಸುವಂತಹ ದಾಖಲೆ ಇರುತ್ತದೆ. ಏನು ದಾಖಲೆ ಎಂದರೆ ಅದು ನಮ್ಮ ಕ್ರಯಪತ್ರ. ನಮ್ಮ ಕ್ರಯಪತ್ರದಲ್ಲಿ ಕಾಣಿಸಲಾದ ಆಸ್ತಿ ಮತ್ತು ಈ ದಾವೆಯಲ್ಲಿ ಕಾಣಿಸಲಾದ ದಾವಾ ಆಸ್ತಿ ಎರಡೂ ಬೇರೆ ಬೇರೆ. ಸಾಕ್ಷಿ ಮುಂದುವರಿದು ಎರಡೂ ಒಂದೇ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ವಾದಿಯರು ಹಾಜರಿಸಿದ ದಾಖಲೆಯನ್ನು ನೋಡಿರುತ್ತೇನೆ. ಮೂಲ ಸರ್ವೆ ನಂ: 122 ಕುಂದಲಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು, ಅದು ಇನಾಮು ಜಮೀನು ಎಂದರೆ ಸರಿ. ಸದರಿ ಜಮೀನು ಯಾವ ವರ್ಷ ಇನಾಮ್ ಜಮೀನು ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಿಪಿ-19 ರ ಪ್ರಕಾರ ಸದರಿ ಜಮೀನು ಇನಾಮ್ ಜಮೀನು ಆಗಿರುತ್ತದೆ ಎಂದರೆ ಸರಿ. ನಿಪಿ-19 ರ ಅನುಕ್ರಮ ಸಂ: 35 ರಲ್ಲಿ ಹೇಳಿದ ಆಸ್ತಿಯೇ ಈ ದಾವೆಯ ದಾವಾ ಆಸ್ತಿ ಎಂದರೆ ಸರಿ. ಮೈಸೂರು ಪರ್ಸನಲ್ ಅಂಡ್ ಮಿಸಲೇನಿಯಸ್ ಆ್ಯಕ್ಸ ಇನಾಮ್ಸ ಅಬಾಲಿಷನ್ ಆ್ಯಕ್ಟ ಬಂದ ನಂತರ ಎಲ್ಲಾ ಇನಾಮ್ ಜಮೀನುಗಳು ಸರ್ಕಾರದ ಸ್ವಾಧೀನಕ್ಕೆ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ದಿ: 07-02-1958 ರಲ್ಲಿ ಪೂಜಪ್ಪ ಮತ್ತು ಅವರ ಸಹೋದರರ ಕಡೆಯಿಂದ ದೊಡ್ಡಮಾರಪ್ಪನವರು ಸರ್ವೆ ನಂ: 122, ನಂತರ ಹೊಸ ಸರ್ವೆ ನಂ: 122/3 ನ್ನು ನಿಪಿ-1

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-12.pdf

ರಂತೆ ನೋಂದಾಯಿತ ಕ್ರಯಪತ್ರದ ಪ್ರಕಾರ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು).**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ದಿನಾಂಕಃ 27.03.2023 ರಂದು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

63ನೇ ಅಪರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಸಿಸಿಹೆಚ್-64, ಸಿಸಿಸಿ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC010183122011/truecopy/order-12.pdf